

# ಆನ್‌ಲೈನ್ ಖರೀದಿಯ ಪೇಚಾಟ

**ಆ ದಿನ ಈ ದಿನ ಎಂಬ ನೆಪದಲ್ಲಿ ನಡೆಯುವ ಆನ್‌ಲೈನ್ ಸೇಲ್‌ಗಳಿಗೇನೂ ಕಮ್ಮಿಯಿಲ್ಲ. ಗ್ರಾಹಕರನ್ನು ಸೆಳೆಯುವ ಈ ಕಸರತ್ತುಗಳ ನಡುವೆ ಖರೀದಿ ಮಾಡಿದವರು ಇಕ್ಕಟ್ಟಿಗೆ ಸಿಲುಕುವ ಪ್ರಸಂಗಗಳೂ ಲೆಕ್ಕವಿಲ್ಲ.**

**■ ಕಾವ್ಯ ಭಾರದ್ವಾಜ್**

ನ್ಯೂ ಇಯರ್ ಸೇಲ್, ಪ್ರೈಸ್ ಕ್ರ್ಯಾಶ್, ಪ್ರೈಸ್ ಡ್ರಾಪ್, ಸ್ಟೀಲ್ಸ್ ಅಂಡ್ ಡೀಲ್ಸ್, ಗ್ರ್ಯಾಬ್ ಆರ್ ಗಾನ್, ಡಬಲ್ ಧಮಾಕ, ಬಯ್ ಅಂಡ್ ಸೇವ್, ಇಯರ್ ಎಂಡ್ ಸೇಲ್... ವರ್ಷವಿಡೀ ಆನ್‌ಲೈನ್ ವಣಿಕರ ಜಾಹೀರಾತುಗಳು ಹರಿದುಬರುತ್ತಲೇ ಇರುತ್ತವೆ. ಅತಿ ಅಗ್ಗದ ದರ, ಅಧಿಕ ರಿಯಾಯ್ತಿ, ಒಂದಷ್ಟು ಕೊಂಡರೆ ಕ್ಯಾಶ್ ಬ್ಯಾಕ್, ಗ್ರಾಹಕನನ್ನು ಸೆಳೆಯಲು ಮಾಡುವ ಕಸರತ್ತು ಒಂದೇ ಎರಡೇ? ಇದರ ಮಧ್ಯೆ ಲೈಟನಿಂಗ್ ಸೇಲ್, ಮಿಡ್ ನೈಟ್ ಸೇಲ್! ಬೇರೆ.

ಈ ಸೇಲ್‌ಗಳ ನಡುವೆ ಪೇಚಿಗೆ ಅಥವಾ ಇಕ್ಕಟ್ಟಿಗೆ ಸಿಲುಕುವ ಪ್ರಸಂಗಗಳು ಸಾಕಷ್ಟುಂಟು.

ಎಂದಿನಂತೆ ದರ, ಗುಣಮಟ್ಟ, ಗ್ರಾಹಕರ ರಿವ್ಯೂ ಇವೆಲ್ಲವನ್ನೂ ತುಲನೆ ಮಾಡಿ ಒಂದಷ್ಟು ಸಾಮಾನುಗಳಿಗೆ ಆರ್ಡರ್ ಮಾಡಿದ್ದೆ. ಬಿಲ್ಲಿಂಗ್‌ನಲ್ಲಿ ಶಿಪ್ಪಿಂಗ್ ಚಾರ್ಜ್ ನೂರು ರೂ. ತೋರಿಸಿದಾಗ ಬೇಸರವಾದರೂ, ಅದರ ಹಿಂದೆಯೇ 'ಫ್ರೀ ಡೆಲಿವರಿ ಬೇಕಾದಲ್ಲಿ ಇನ್ನೂ ನೂರು ರೂಪಾಯಿ ಸಾಮಾನು ಖರೀದಿಸಿ' ಎಂಬ ಪುಕ್ಕಟೆ ಉಪದೇಶ (ಆಮಿಷ) ಸ್ಕ್ರೀನ್‌ನಲ್ಲಿ ಕಂಡಿತು. ಶಿಪ್ಪಿಂಗ್‌ಗೆ ವೃಥಾ ಸುರಿಯುವ ಬದಲು ಖರೀದಿ ಮಾಡಿದರೆ ವಸ್ತುವಾದರೂ ಬರುತ್ತದೆ ಎಂಬ ಮಧ್ಯಮ ವರ್ಗದ ದೂರಾಲೋಚನೆಯಿಂದ ಮತ್ತೆ ನೂರರ ಒಳಗಿನ ಖರೀದಿಗೆ ಒಂದಷ್ಟು ತಡಕಾಡಿ, ಕೊನೆಗೆ ಅಡುಗೆಮನೆಗೆ ಬ್ರ್ಯಾಂಡೆಡ್ ಸ್ಪಾಂಜ್, ಪ್ಯಾಕ್ ಆಫ್ ತ್ರೀ ಆರ್ಡರ್‌ಗೆ ಸೇರಿಸಿ, ಹಣ ಪಾವತಿಸಿದ್ದಾಗಿತ್ತು. ನಿಗದಿತ ದಿನ ಡೆಲಿವರಿ ಬಂತು.

ಪ್ಯಾಕ್ ಒಡೆದು ವಸ್ತುಗಳು ಬಂದಿರುವ ಬಗ್ಗೆ ಖಾತರಿಸಿಕೊಳ್ಳಲು ಒಂದೊಂದೇ ವಸ್ತುವನ್ನು ಆರ್ಡರ್ ಕಾಪಿಯಲ್ಲಿ ಟಿಕ್ ಮಾಡುತ್ತ ಹೋದರೆ, ಸ್ಪಾಂಜ್ ಕಾಣೆ! ಬದಲಿಗೆ ಬೇರೊಂದು ಪ್ಯಾಕ್... ಬಿಡಿಸಿ ನೋಡಿದರೆ ಅದೇ ಬ್ರ್ಯಾಂಡ್‌ನ ಫ್ಲಾಸ್ಕ್! ಸ್ಪಾಂಜ್ 'ವಾಪಸ್ ಮಾಡಲಾಗದ ವಸ್ತು'ಗಳ ವಿಭಾಗದಲ್ಲಿ ಇದ್ದಿದ್ದರಿಂದ, ನಮ್ಮಲ್ಲೇ ಉಳಿಯಿತು.

ಮತ್ತೊಮ್ಮೆ ಇಂತಹುದೇ ರಿಯಾಯ್ತಿಗಳ ಮಹಾಪೂರವೇ ಹೊತ್ತಿದ್ದ ಬಗೆಬಗೆಯ ಉಡುಗೆಗಳು ಮಿಂಚಿ ಮಾಯವಾಗುತ್ತಿದ್ದ ಮಿಡ್ ನೈಟ್ ಸೇಲ್ ಗಮನಸೆಳೆಯಿತು. ಜೆಗಿಂಗ್ಸ್ ಕೊಳ್ಳಲೆಂದು ಕಣ್ಣಿಗೆ ಎಣ್ಣೆ ಬಳಿದವಳಂತೆ ಕಾದು ಶೇ. 80 ರಿಯಾಯಿತಿಯಲ್ಲಿ, ಜನಪ್ರಿಯ ಬ್ರ್ಯಾಂಡಿನ ಜೆಗಿಂಗ್ಸ್ ಬುಕ್ ಮಾಡಿದೆ. ಏನನ್ನೋ ಸಾಧಿಸಿದಷ್ಟು ಸಂಭ್ರಮ!

2 ದಿನಗಳಲ್ಲಿ ತಲುಪಿದ ಪ್ಯಾಕ್ ತೆರೆದು ನೋಡಿದರೆ ಪ್ಯಾಂಟ್ ಬರೀ 2 ಮೊಳ ಉದ್ದ! ಧರಿಸಲು ಶತಪ್ರಯತ್ನ ಮಾಡಿದೆ. ನಾಲ್ಕೂ ಕಡೆ ಸ್ಟ್ರೆಚ್ ಮಾಡಬಹುದಾದ ಬಟ್ಟೆ... ಎಷ್ಟು ಎಳೆದರೂ ಮೊಣಕಾಲಿಂದ ಮೇಲಕ್ಕೆ ಹತ್ತದು. ಅದನ್ನು ಸಮಾರಂಭವೊಂದಕ್ಕೆ ನನ್ನ ಮಗನ ಕುರ್ತಾಗೆ ಏರಿಸಿದೆ. ಅವನ ಕಾಲಿನ ತುದಿಗೆ ಪ್ಯಾಂಟಿನ ಹೆಚ್ಚುವರಿ ಉದ್ದ ನಾಲ್ಕೈದು ಬಳೆಗಳಂತೆ ಕುಳಿತಿತ್ತು. ಇವನ ಉಡುಗೆ ನೋಡಿ 'ಪುಶ್ ಬ್ಯಾಕ್ ಪ್ಯಾಂಟಾ?' ಎಂದು ಮಗನನ್ನು ಮುದ್ದು ಮಾಡಿದವರಿಗೆ, 'ಮಕ್ಕಳ ಲೇಟೆಸ್ಟ್ ಫ್ಯಾಷನ್' ಎಂದು ಒಳಗೊಳಗೇ ನಕ್ಕಿದ್ದೆ.

ಇತ್ತೀಚೆಗೆ ಬ್ಯಾಟರಿ ಚಾಲಿತ ವಾಟರ್ ಫ್ಲಾಸೆರ್ (ಹಲ್ಲುಗಳನ್ನು ಸ್ವಚ್ಛ ಮಾಡುವ ಸಾಧನ) ಆರ್ಡರ್ ಮಾಡಿ, ನಿಗದಿತ ಸಮಯಕ್ಕೆ ತಲುಪಿದ್ದೂ ಆಯಿತು. ಅದು ಕೆಲಸ ಮಾಡುತ್ತಿದೆಯೇ ಎಂದು ಪರೀಕ್ಷಿಸಬೇಕಲ್ಲ? ಅದಕ್ಕೆ ನೀರು ತುಂಬಿ ಸ್ವಿಚ್ ಆನ್ ಮಾಡಿ, ಹೈ, ಲೋ ಮೀಡಿಯಂ ಆಯ್ಕೆಗಳಲ್ಲಿ ಮೊದಲಿಗೆ ಲೋ ಇರಲಿ ಎಂದು ಆರಿಸಿ ಹಲ್ಲುಗಳ ಬಳಿ ತಂದಿದ್ದೇ ತಡ ಭರ್ರೆಂದು ಅತಿವೇಗದಿಂದ ನೀರು ನುಗ್ಗಿ ವಸಡಿನಿಂದ ರಕ್ತ ಹೊರಬಂದಾಗ ತಕ್ಷಣ ಆಫ್ ಮಾಡಿದೆ. ಬರಿ ನೀರಿನಲ್ಲಿ ಮುಕ್ಕಳಿಸಿದ್ದರೂ ಹಲ್ಲು, ವಸಡಿಗೆ ಅಂಟಿದ್ದು ಹೊರಬರುತ್ತಿತ್ತು. ಇದೆಂತಹ ದುಸ್ಸಾಹಸ ಎಂದು ಮತ್ತೆ ಆ ಉಪಕರಣ ಪರೀಕ್ಷಿಸಿದೆ. ಹೆಸರಿಗೆ ಮೂರು ಆಯ್ಕೆಯಿದ್ದರೂ, ಕೆಲಸ ಮಾಡುತ್ತಿದ್ದದ್ದು ಹೈ ಸ್ಪೀಡ್‌ನಲ್ಲಿ ಮಾತ್ರ!

ಗ್ರಾಹಕ ಕೇಂದ್ರಕ್ಕೆ ದೂರು ಸಲ್ಲಿಸಿದೆ. ಬಿರುಸಾದ ಮಾತುಕತೆ ನಂತರ ಆ ಉಪಕರಣ ಪರ್ಸನಲ್ ಹೈಜಿನ್ ವಿಭಾಗಕ್ಕೆ ಸೇರಿದ್ದರಿಂದ ವಾಪಸ್ ಮಾಡಲಾಗದು ಎಂದರು. ಆದರೆ ದುಡ್ಡು ಮರಳಿ ವ್ಯಾಲೆಟ್‌ಗೆ ಬಂತು. ಈಗ ಅದೇ ಉಪಕರಣ, ನಮ್ಮ ಬಾಲ್ಕನಿ ಗಿಡಗಳಿಗೆ ನೀರು ಹನಿಸಲು ಉಪಯೋಗವಾಗುತ್ತಿದೆ. ಪುಕ್ಕಟೆ ವಸ್ತು ಬಂದ ಲೆಕ್ಕವೇ ಎಂದು ಸಮಾಧಾನ ಪಟ್ಟಿದ್ದಂತೂ ನಿಜ.

ಈ ಡಿಜಿಟಲ್ ಯುಗದಲ್ಲಿ ಏನೋ ಖರೀದಿಸಿದರೆ ಮತ್ತೇನೋ ಬರುವುದು ಅಥವಾ ಬಂದದ್ದು ನಿಗದಿತ ಉಪಯೋಗಕ್ಕೆ ಬಾರದಿದ್ದರೂ ಅನಪೇಕ್ಷಿತವಾಗಿ ಬೇರಾವುದೋ ಕೆಲಸಕ್ಕೆ ಹೊಂದಿಕೊಳ್ಳುವುದು ಇದ್ದೇ ಇರುತ್ತದೆ. ಆದರೆ, ರಿಟರ್ನ್ ಪಾಲಿಸಿ ಇರುವ ವಸ್ತುಗಳನ್ನು ನೋಡಿ ಖರೀದಿಸಿದರೆ ಅಷ್ಟು ಮೋಸವಾಗದು ಎಂಬುದೂ ಮನದಟ್ಟಾಗಿದೆ.

ಪ್ರತಿಕ್ರಿಯಿಸಿ: feedback@sudha.co.in